ನಾನು ಕಂಡ
# ವಿವೇಕಾನಂದ
ಡಾ.ಆರ್. ಬಾಲಸುಬ್ರಹ್ಮಣ್ಯಂ



# ಸಾವು ಎಂಬ ಕಟು ವಾಸ್ತವ

ಸಾವು ಎಂಬುದು ನಿಜಕ್ಕೂ ಒಂದು ವಿಲಕ್ಷಣವಾದ ಅನುಭವ. ಯಾರೇ ಆಗಲಿ ಅವರ ವೈಯಕ್ತಿಕ ಜೀವನಕ್ಕೆ ಸಾವಿನ ಬಿಸಿ ತಟ್ಟುವವರೆಗೂ ಅದರ ಬಗ್ಗೆ ವಸ್ತುನಿಷ್ಠವಾಗಿಯೇ ಇರುತ್ತಾರೆ. ಜೀವನದ ಸಹಜ ಘಟನೆ ಎಂಬಂತೆ ತಾತ್ವಿಕ ದೃಷ್ಟಿಕೋನದಿಂದಲೇ ಅದನ್ನು ನೋಡುತ್ತಾರೆ. ವೈದ್ಯನಾಗಿರುವ ನಾನು ನನ್ನ ವೃತ್ತಿ ಜೀವನದಲ್ಲಿ ನೂರಾರು ಸಾವುಗಳನ್ನು ಕಂಡಿದ್ದೇನೆ.

ನಮ್ಮ ಕುಟುಂಬದ ಸದಸ್ಯರು ಅಥವಾ ಸ್ನೇಹಿತರು ಸಾವಿಗೀಡಾದಾಗಷ್ಟೇ ಸಾವು ತನ್ನ ಜೊತೆಯಲ್ಲಿ ಹೊತ್ತು ತರುವ ನೋವು ಮತ್ತು ಸಂಕಟದ ನಿಜವಾದ ಅನುಭವ ನಮಗಾಗುತ್ತದೆ. ಇದಕ್ಕೆ ಯಾವುದೇ ವಯಸ್ಸಿನ ಮಿತಿ ಇರುವುದಿಲ್ಲ. ಆಪ್ತೇಷ್ಟರ ಸಾವಿನ ದುಃಖದ ಜೊತೆಗೆ ಹೊಂದಾಣಿಕೆ ಮಾಡಿಕೊಂಡು ಬದುಕುವುದನ್ನು ಕಲಿಯಬೇಕಾಗುತ್ತದೆ. ಕುಟುಂಬದ ಸದಸ್ಯರ ಸಾವಿನ ಬಳಿಕ ವೃತ್ತಿ, ಉದ್ಯೋಗದ ಸ್ಥಳ ಬದಲಿಸಿಕೊಂಡ, ಪ್ರಮುಖ ನಿರ್ಧಾರಗಳನ್ನೇ ಮುಂದೂಡಿದ ಬಹಳಷ್ಟು ಮಂದಿಯನ್ನು ನಾನು ಕಂಡಿದ್ದೇನೆ.

ಯುವ ನರೇಂದ್ರ ಅವರಿಗೂ ಸಾವಿನ ಪರಿಣಾಮಗಳನ್ನು ಎದುರಿಸಬೇಕಾದ ಪರಿಸ್ಥಿತಿ ಬಂದೊದಗಿತ್ತು. ಅದು ಅತ್ಯಂತ ಸವಾಲಿನದಾಗಿತ್ತು, ಒಂದು ವೇಳೆ ನರೇಂದ್ರ ಎದೆಗುಂದಿದ್ದರೆ ಆಗಿದ್ದರೆ ಅವರ ಭವಿಷ್ಯವನ್ನೇ ಅದು ಬುಡಮೇಲು ಮಾಡಿಬಿಡುತ್ತಿತ್ತು. 1884ರ ಆರಂಭದಲ್ಲಿ ಪ್ರಪಂಚದ ಅಂತಹ ಕಟು ವಾಸ್ತವಗಳಿಗೆ ಅವರು ಮುಖಾಮುಖಿಯಾದರು. ಆಧ್ಯಾತ್ಮಿಕ ಚಿಂತನೆಗಳನ್ನು ಹೊಂದಿದ್ದ ಆ ಮೃದು ಹೃದಯಿಗೆ ಅದರಿಂದ ಎಷ್ಟು ಆಘಾತವಾಗಿರಬೇಡ. ಫೆಬ್ರುವರಿ 25ರಂದು ಅವರು ಬಾರಾನಗರದಲ್ಲಿ ನೆಲೆಸಿದ್ದರು. ಇಡೀ ದಿನ ಭಕ್ತಿಗೀತೆಗಳನ್ನು ಹಾಡುತ್ತಾ, ಸ್ನೇಹಿತರೊಂದಿಗೆ ಚರ್ಚಿಸುತ್ತಾ ಕಳೆದಿದ್ದ ನರೇಂದ್ರ ರಾತ್ರಿ 11 ಗಂಟೆ ಸುಮಾರಿಗೆ ಹಾಸಿಗೆಗೆ ತೆರಳಿದ್ದರು. ಮುಂಜಾನೆ 2 ಗಂಟೆಯಾಗುವಷ್ಟರಲ್ಲಿ, ಅವರ ತಂದೆ ಹೃದಯಾಘಾತದಿಂದ ನಿಧನರಾದ ಸುದ್ದಿಯನ್ನು ಸ್ನೇಹಿತರಾದ ಹೇಮಾಲಿ ಹೊತ್ತು ತಂದಿದ್ದರು.

ಇದನ್ನು ಕೇಳಿ ತೀವ್ರ ದುಃಖಕ್ಕೊಳಗಾದ ನರೇಂದ್ರ ಕಲ್ಕತ್ತಕ್ಕೆ ಧಾವಿಸಿದರು. ಅವರ ತಾಯಿ, ಇಬ್ಬರು ತಮ್ಮಂದಿರು ಮತ್ತು ತಂಗಿಯರು ಮಂಚದ ಮೇಲೆ ಮಲಗಿಸಿದ್ದ ತಂದೆಯ ಶವದ ಬಳಿ ರೋದಿಸುತ್ತಿದ್ದರು. ಕಂಗಾಲಾಗಿದ್ದ ನರೇಂದ್ರ ಮೊದಲಿಗೆ ಯಾವ ಮಾತನ್ನೂ ಆಡಲಿಲ್ಲ, ಅಳಲೂ ಇಲ್ಲ. ಕೊಂಚ ಹೊತ್ತು ಕಳೆದ ಬಳಿಕ ಅವರ ದುಃಖದ ಕಟ್ಟೆಯೊಡೆಯಿತು. ಮನೆಯ ಮೊದಲ ಮಗನಾಗಿ ತಂದೆಯ ಅಂತಿಮ ಸಂಸ್ಕಾರದ ಎಲ್ಲ ವಿಧಿಗಳಲ್ಲೂ ಅವರು ಪಾಲ್ಗೊಂಡರು.

ಅವರ ತಂದೆ ವಿಶ್ವನಾಥ ದತ್ತ ಗಂಭೀರವಾದ ಮೂತ್ರ ಸಂಬಂಧಿ ಕಾಯಿಲೆಗೆ ತುತ್ತಾಗಿದ್ದರು ಮತ್ತು ಕೆಲ ದಿನಗಳ ಹಿಂದಷ್ಟೇ ಅವರಿಗೆ ತೀವ್ರ ಹೃದಯಾಘಾತವಾಗಿತ್ತು. ವೈದ್ಯರು ಅವರಿಗೆ ವಿಶ್ರಾಂತಿ ಪಡೆಯುವಂತೆ ತಿಳಿಸಿದ್ದರೂ ಕೆಲಸದ ಒತ್ತಡದಿಂದ ಅದನ್ನು ಪಾಲಿಸಲು ಅವರಿಗೆ ಸಾಧ್ಯವಾಗಿರಲಿಲ್ಲ. ಸಾವಿನ ದಿನವೂ ಅವರು ಕೆಲಸದ ಮೇಲೆ ತೆರಳಿದ್ದರು. ಮನೆಗೆ ಹಿಂದಿರುಗುತ್ತಿದ್ದಂತೆಯೇ ಎದೆ ನೋವು ಕಾಣಿಸಿಕೊಂಡಿದ್ದರಿಂದ ಎದೆಗೆ ಮುಲಾಮು ಹಚ್ಚಿಕೊಂಡಿದ್ದರು. ಆದರೆ ರಾತ್ರಿ 10 ಗಂಟೆ ಸುಮಾರಿಗೆ ವಾಂತಿ ಮಾಡಿಕೊಂಡು ಕೂಡಲೇ ಅವರು ಮೃತಪಟ್ಟಿದ್ದರು. ಮರುದಿನ ನರೇಂದ್ರನಾಥರಿಗೆ ಹೆಣ್ಣು ನೋಡಲು ಅವರು ಹೋಗುವವರಿದ್ದರು. ಆದರೆ ವಿಧಿಯ ಬಯಕೆಯೇ ಬೇರೆ ಆಗಿತ್ತು.

ವಿಶ್ವನಾಥ ದತ್ತರು ಸಂಪಾದನೆ ಮಾಡುತ್ತಿದ್ದ ಕುಟುಂಬದ ಏಕೈಕ ಸದಸ್ಯರಾಗಿದ್ದುದರಿಂದ ಅವರ ಸಾವು ಇಡೀ ಮನೆಯನ್ನು ಹತಾಶ ಸ್ಥಿತಿಗೆ ತಂದಿಟ್ಟಿತ್ತು. ಹೀಗಾಗಿ ಕುಟುಂಬವನ್ನು ಸಲಹುವ ಹೊಣೆ ನರೇಂದ್ರನಾಥರ ಮೇಲೆ ಬಿತ್ತು. ಹೇಗಾದರೂ ಮಾಡಿ ಈ ಸ್ಥಿತಿಯನ್ನು ನಿಭಾಯಿಸುವ ಮಾರ್ಗವನ್ನು ಅವರು ಕಂಡುಕೊಳ್ಳಲೇ ಬೇಕಾಗಿತ್ತು. ಒಂದೆಡೆ ರಾಮಕೃಷ್ಣರ ಪ್ರಭಾವ ಮತ್ತು ಅಧ್ಯಾತ್ಮದ ಉನ್ನತಿಗೆ ಶ್ರಮಿಸಬೇಕೆಂಬ ಅವರ ಬಯಕೆ, ಇನ್ನೊಂದೆಡೆ ಮನೆಯ ಹಿರಿಯ ಮಗನಾಗಿ ಕುಟುಂಬವನ್ನು ಸಾಕಿ ಸಲಹಬೇಕಾದ ಹೊಣೆಗಾರಿಕೆ. ಇಂತಹ ಕಷ್ಟದ ದಿನಗಳನ್ನು ನರೇಂದ್ರನಾಥರು ಹೇಗೆ ನಿಭಾಯಿಸಿದರು ಎಂಬುದನ್ನು ಕಂಡಾಗ, ಎರಡು ದೋಣಿಗಳಲ್ಲಿ ಕಾಲಿಟ್ಟು ಸಾಗಿದರೂ ತಮ್ಮ ಮೂಲ ಉದ್ದೇಶದ ಜೊತೆ ರಾಜಿ ಮಾಡಿಕೊಳ್ಳದ ಅವರ ನೈಜ ಸ್ವರೂಪದ ಅರಿವು ನಮಗಾಗುತ್ತದೆ.

ನರೇಂದ್ರರ ಮನೋಬಲ ಮತ್ತು ದೃಢ ಸಂಕಲ್ಪ ಇಂತಹ ಸ್ಥಿತಿಗಳೆಲ್ಲವನ್ನೂ ಮೆಟ್ಟಿ ನಿಲ್ಲಲು ಮತ್ತು ನರೇಂದ್ರನಾಥರಿಂದ ಸ್ವಾಮಿ ವಿವೇಕಾನಂದರಾಗಿ ರೂಪುಗೊಳ್ಳಲು ಅವರಿಗೆ ನೆರವಾದವು. ◆